ದಾಳಗಳೇ ನನಗೆ ಬಿಲ್ಲು ಬಾಣ, ಸಂಖ್ಯಾ ಸಿದ್ಧಿ– ಅಕ್ಷ ಹೃದಯ ನನ್ನ ಬಿಲ್ಲಿನ ಹೆದೆ, ಹಾಸಂಗಿಯೇ ನನ್ನ ರಥ.

**ದುರ್ಯೋಧನ:** ಅಪ್ಪಾಜಿ, ಇವನು ಜೂಜು ಬಲ್ಲವನು

ಜೂಜಿನಲ್ಲಿ ಪಾಂಡವರ ಐಶ್ವರ್ಯವನ್ನೆಲ್ಲ ಒಂದೇ ಆಟದಲ್ಲಿ ದೋಚಲು ತಯಾರಾಗಿದ್ದಾನೆ

ಅನುಮತಿ ಕೊಡು

**ಧೃತರಾಷ್ಟ್ರ:** ಇಲ್ಲಪ್ಪ, ನನಗೆ ಬಲಿಷ್ಠರ ಜತೆ ಸೆಣಸಾಟ ಬಿಲ್ಕುಲ್ ಒಪ್ಪಿಗೆ ಇಲ್ಲ

ಅಪ್ಪಾ ರಾಜಕುಮಾರ... ಹಗೆತನ ಉಕ್ಕಿನ ಕತ್ತಿಯ ಹಾಗೆ

ನೋಡು, ಕೇಡನ್ನೇ ಸಂಪತ್ತು ಅಂದುಕೊಳ್ಳುತ್ತಿದೀಯ

ಜೂಜುಜಾಲ ಯಾವ ಥರದಲ್ಲೇ ಶುರುವಾದರೂ ಅದರ ಜತೇಲೇ ಕತ್ತಿ ಬಾಣಗಳೂ ಹುಟ್ಟಿಕೊಳ್ಳುತ್ತವೆ

**ದುರ್ಯೋಧನ:** ಇದರ ರೀತಿ ರಿವಾಜೆಲ್ಲಾ ಪೂರ್ವಿಕರು ಮಾಡಿದ್ದು

ಜೂಜಿನ ನಡಾವಳಿಯನ್ನೆಲ್ಲಾ ಆ ಕಾಲದಲ್ಲೆ ಮಾಡಿಟ್ಟಿದ್ದು

ಅದರಲ್ಲೇನು ಕೇಡಿಲ್ಲ. ನೋವಿಲ್ಲ

ಸದ್ಯಕ್ಕೆ ಶಕುನಿಯ ಮಾತನ್ನ ಒಪ್ಪಿಕೊ

ಸುಮ್ಮನೆ ಕೂಟ ಸಭೆಯ ನಿರ್ಮಾಣಕ್ಕೆ ಅಪ್ಪಣೆ ಹೊರಡಿಸು

**ಧೃತರಾಷ್ಟ್ರ:** ಈ ವಿಷಯಕ್ಕೆ ನಾನು ಮಹಾತ್ಮನಾದ ವಿದುರನನ್ನ ಕೇಳಬೇಕು

ಅವನಿಂದ ಈ ವಿಷಯದ ಹುರುಳ ನಿಶ್ಚಯಿಸುತ್ತೇನೆ.

**ದುರ್ಯೋಧನ:** ನಿಜ, ವಿದುರ ವ್ಯಾಸನಿಗಿಂತ ತಿಳಿದವನು. ಆದರೆ ಅವನು ಧರ್ಮವನ್ನು ಹೇಳುತ್ತಾನೆ

ಜಯಕ್ಕೂ ಧರ್ಮಕ್ಕೂ ತುಂಬಾ ದೂರ. ವ್ಯಾಸ ವಿದುರ ಇಬ್ಬರೂ ಜಯಕ್ಕೆ ವಿರೋಧಿಗಳು

ನೀನು ವಿದುರನಲ್ಲಿ ಈ ಮಾತನ್ನೆತ್ತಿದರೆ ನಿನ್ನ ಮನಸ್ಸನ್ನು ಕೆಡಿಸಿ ಬಿಡುತ್ತಾನೆ. ಅವನ ಒಲವು ನಮಗಿಂತ ಪಾಂಡವರ ಕಡೆಗೇ

ಮನುಷ್ಯ ಇನ್ನೊಬ್ಬನ ಅವಲಂಬಿಸಿಕೊಂಡು ನಿರ್ಧಾರ ತೆಗೆದುಕೊಳ್ಳಬಾರದು

ಯಾವುದೇ ಕೆಲಸದಲ್ಲೂ ಇಬ್ಬರ ಮನಸ್ಸು ಯಾವಾಗಲೂ ಒಂದೇ ಆಗಿರುವುದಿಲ್ಲ

ಕಷ್ಟಕ್ಕೆ ಹೆದರಿ ತಪ್ಪಿಸಿಕೊಳ್ಳುವವನು ಹುಲ್ಲಿನ ಚಾಪೆ ಮಳೆಗೆ ಬಿದ್ದು ಕೊಳೆಯುವ ಹಾಗೆ

ನಾಶವಾಗಿ ಬಿಡುತ್ತಾನೆ

ಒಬ್ಬನ ಏಳಿಗೆ ಆಗಲಿ ಅಂತ ಸಾವುವ್ಯಾಧಿ ಕಾದು ಕೂತಿರುವುದಿಲ್ಲ

ಶಕ್ತಿ ಇರುವಾಗಲೇ ಸಾಧಿಸಿಬಿಡಬೇಕು

**ಧೃತರಾಷ್ಟ್ರ:** ಉಕ್ಕಿನ ಶಸ್ತ್ರಕ್ಕಿಂತ ಬಲವಾದದ್ದು ವೈರ

ವೈರವುಳ್ಳವನಿಗೆ ಅಗಾಧ ನೋವೂ ಉಂಟಾಗುತ್ತದೆ

ಯಾವುದನ್ನು ನೀನು ಲಾಭಕರ ಎಂದುಕೊಂಡಿದೀಯೋ ಆ ಜೂಜು

ನೂರಾರು ಕಲಹಗಳನ್ನು ಗಂಟು ಕಟ್ಟಿ ಮಾಡಿದ್ದು

ನನ್ನ ಹಿರಿಯ ಮಗ ನೀನು. ನನ್ನ ಹಿರಿಯ ಹೆಂಡತಿಯಲ್ಲಿ ಹುಟ್ಟಿದವನು

ನನ್ನ ರಾಜಕುಮಾರ. ಪಾಂಡವರ ದ್ವೇಷಿಸಬೇಡ ಮಗು. ನಿನಗೇನು ಕಡಮೆಯಾಗಿದೆ ಹೇಳು

ಭರತ ಕುಲಕ್ಕೆ ವೃಷಭನ ಥರ ಹುಟ್ಟಿದೀಯ

ಅಂಥವನು ಯುಧಿಷ್ಠಿರನನ್ನು ಕಂಡು ಅಸೂಯೆಪಡಬೇಕು ಯಾಕೆ

ನೋಡು ಅವನಲ್ಲಿ ಕಪಟವಿಲ್ಲ. ಅವನ ಗುರಿ ನನ್ನ ಗುರಿಗೆ ವಿರುದ್ಧವಾಗೂ ಇಲ್ಲ

ನಿನ್ನ ಮೇಲೆ ಅವನಿಗೆ ದ್ವೇಷ ಬುದ್ಧಿಯೂ ಇಲ್ಲ. ಅವನಿಗಿಂತ ಸಿರಿಸಂಪತ್ತಲ್ಲಿ

ಕುಲದಲ್ಲಿ ನೀನು ಕೀಳೇನೂ ಅಲ್ಲ. ಅವನ ವೈಭವ ಕಂಡು ನೀನೇಕೆ ಕೊರಗಬೇಕು

ಅಥವಾ ಅವನ ಯಾಗ ವೈಭವ ನೋಡಿ ಕೊರಗುತ್ತಿದೀಯೇನೋ

ನೀನೂ ನಿನ್ನ ಪುರೋಹಿತರನ್ನ ಕರೆಸು. ಅವನು ಮಾಡಿದ್ದಕ್ಕಿಂತ ಏಳು ಪಟ್ಟು ದೊಡ್ಡ ಯಾಗ ನಡೆಸು. ಲೋಕದ ರಾಜರೆಲ್ಲ ಬೇಕಾದಷ್ಟು ಐಶ್ವರ್ಯ

ಆಭರಣಗಳನ್ನು ಗೌರವ ಪ್ರೀತಿಯಿಂದಲೇ ತಂದೊಪ್ಪಿಸುತ್ತಾರೆ

ಪರರ ಸೊತ್ತಿಗೆ ಆಸೆಪಡುವುದರಿಂದ ಖಂಡಿತ ಒಳ್ಳೆಯದಾಗುವುದಿಲ್ಲ. ನಿನಗೆ ಇರುವುದರಲ್ಲಿ ನೀನು ತೃಪ್ತಿ ಪಡಬೇಕು. ಇದು ಸಂತೋಷದ ಹಾದಿ

ದೊರೆತನ ಎಂದರೆ ಏನೆಂದುಕೊಂಡಿದೀಯಾ. ಬೇರೆಯವರ ಸ್ವತ್ತಿಗೆ ಆಸೆ ಪಡದಿರುವುದು

ತನ್ನ ಕರ್ತವ್ಯದಲ್ಲಿ ದೃಢ ಬುದ್ಧಿ. ಸಂಪಾದಿಸಿದ್ದನ್ನು ಉಳಿಸಿಕೊಳ್ಳುವುದು

ಇದು ದೊರೆತನ. ಆಪತ್ತಿನಲ್ಲಿ ಎದೆಗುಂದದೆ ಇದ್ದವನದೆ ಖಂಡಿತ ಏಳಿಗೆ ಮನಸ್ಸನ್ನು ಅಡಕ ಮಾಡಿಕೊಂಡು ಸದಾ ಎಚ್ಚರದಲ್ಲಿರುವವನು ಯಾವತ್ತೂ ಕ್ಷೇಮವಾಗಿರುತ್ತಾನೆ. ನೋಡು ಯಾಗಶಾಲೆಯಲ್ಲಿ



ಯಥೇಚ್ಛ ದಾನ ಮಾಡು, ಇಷ್ಟು ಭೋಗಗಳನ್ನು ಅನುಭವಿಸಿ ಭೋಗಿಸು ಸಮಾಧಾನ ತಂದುಕೊ

**ದುರ್ಯೋಧನ:** ನಿನಗೆ ಎಲ್ಲವೂ ಗೊತ್ತು. ಆದರೂ ಗೊಂದಲಗೊಳಿಸುತ್ತಿದ್ದೀಯಾ. ದೋಣಿಗೆ ಕಟ್ಟಿಹಾಕಿದ ದೋಣಿ ನೀನು, ಮುಂದಿನದು ಎಳೆದತ್ತ ಹೋಗುವವನು. ನಿನಗೇ ನಿನ್ನ ಕರ್ತವ್ಯದ ಮೇಲೆ ಗಮನ ಇಲ್ಲವೋ ಅಥವಾ ನಿನಗೆ ನನ್ನನ್ನು ಕಂಡರೆ ಆಗುವುದಿಲ್ಲವೋ ಗೊತ್ತಿಲ್ಲ. ಆದರೆ ಇನ್ನು ಮೇಲೆ ನಿನ್ನ ಮಾತಿನಂತೆ ನಿನ್ನ ಮಕ್ಕಳು ನಡೆಯೋದು ಆಗದ ಮಾತು ಎಂದು ಕಾಣುತ್ತದೆ.

ಯಾವತ್ತೋ ದೂರದಲ್ಲಿ ಸಂಭವಿಸುತ್ತದೆ ಎಂದು ಊಹಿಸಿಕೊಂಡು ಚಿಂತೆಯಲ್ಲಿರುತ್ತೀಯ. ಹಗೆಗಳ ಸಂಚಿಗೆ ಸಿಕ್ಕವನ ಬುದ್ಧಿವಾದವನ್ನು ನಂಬಿ ನಡೆಯುವವನಿಗೆ ತನ್ನ ದಾರಿ ಯಾವುದು ಎಂಬುದೇ ಗೊಂದಲ. ಅಂಥವನನ್ನು ಉಳಿದವರು ಅನುಸರಿಸುವುದು ಹೇಗೆ? ನೀನು ಹಿರಿಯರ ಸೇವೆ ಮಾಡಿದವನು. ಇಂದ್ರಿಯಗಳನ್ನು ಗೆದ್ದವನು. ಆದರೂ ನಮಗೆ ಗೊಂದಲ ಉಂಟುಮಾಡುತ್ತೀಯ.

ನೋಡು, ಬೃಹಸ್ಪತಿಯೇ ಹೇಳಿದಾನೆ: ಲೋಕದ ದಾರಿಯೇ ಬೇರೆ. ರಾಜರ ದಾರಿಯೇ ಬೇರೆ. ರಾಜ ಯಾವಾಗಲೂ ಸ್ವಪ್ರಯೋಜನವನ್ನೇ ಚಿಂತಿಸಬೇಕು. ಅದು ಅಧರ್ಮವೋ ಧರ್ಮವೋ ಅದು ಬೇಕಾಗಿಲ್ಲ ರಾಜನ ದಾರಿ ಸದಾ ಗೆಲುವಿನ ಕಡೆಗಿರಬೇಕು. ಸಾರಥಿಯು ಕುದುರೆಗಳನ್ನು ಚಾಟಿ ಹಿಡಿದು ಸಕಲ ದಿಕ್ಕಲ್ಲೂ ಓಡಿಸುವ ಹಾಗೆ. ವಿರೋಧಿಗಳ ಸಂಪತ್ತನ್ನು ವಶಪಡಿಸಿಕೊಳ್ಳಬೇಕು. ಅಲಗಿನಿಂದ ಕತ್ತರಿಸುವುದು ಮಾತ್ರ ಶಸ್ತ್ರ ಅಂದುಕೊಂಡೆಯಾ? ಶತ್ರುವನ್ನು ಬಾಧೆಪಡಿಸುವ ಸಕಲ ಉದ್ಯೋಗವೂ ಶಸ್ತ್ರವೇ. ಶತ್ರುತ್ವ ಮಿತ್ರತ್ವಗಳನ್ನು ಯಾರೂ ನಿರ್ಣಯಿಸುವುದಕ್ಕಾಗುವುದಿಲ್ಲ. ಯಾವನಿಂದ ತನಗೆ ಸಂತಾಪವೋ, ಅವನು ಶತ್ರು.

ಹೌದು, ನಾನು ಅತೃಪ್ತನಾಗಿರತೇನೆ. ಅತೃಪ್ತಿಯಿಂದಲೇ ಸಂಪತ್ತು. ನಮ್ಮಲ್ಲಿ ಬಲವೂ ಐಶ್ವರ್ಯವೂ ಇರುವಾಗ ಸ್ವಾರ್ಥದ ದಾರಿಯನ್ನು ಅನುಸರಿಸಿದರೆ ಏನು ತಪ್ಪು? ಇಂದ್ರ ಮಾಡಿದ್ದು ಏನು? ಯುದ್ಧ ಮಾಡುವುದಿಲ್ಲವೆಂದು ಪ್ರತಿಜ್ಞೆ ಮಾಡಿದ. ನಮುಚಿಯ ತಲೆಯನ್ನು ಕಡಿದ. ಶತ್ರುವನ್ನು ಹೀಗೇ ನಾಶಪಡಿಸಬೇಕು ಎಂದು ಇಂದ್ರನೇ ತೋರಿಸಿಕೊಟ್ಟವನೆ. ಅದು ರಾಜಧರ್ಮ.

ಈರ್ಶೆ ಇಲ್ಲದ ರಾಜ, ಊರು ತಿರುಗದ ಬ್ರಾಹ್ಮಣ ಇಬ್ಬರನ್ನೂ ಇಲಿಯನ್ನು ನುಂಗಿದ ಹಾವಿನ ಹಾಗೆ ಭೂಮಿ ನುಂಗಿ ಬಿಡುತ್ತದೆ. ರಾಜ ಹುಟ್ಟುವಾಗಲೇ ಯಾರು ಯಾರಿಗೂ ಶತ್ರುವಾಗಿ ಹುಟ್ಟುವುದಿಲ್ಲ. ತನ್ನ ಮಾರ್ಗದಲ್ಲಿ ಇನ್ನೊಬ್ಬನೂ ನಡೆಯುತ್ತಿದ್ದರೆ ಅವನು ಶತ್ರು. ಇನ್ನಾರೂ ಅಲ್ಲ. ಶತ್ರುಗಳ ಏಳಿಗೆಯ ಬಗ್ಗೆ ಉತ್ಪ್ರೇಕ್ಷೆ ಮಾಡಿದರೆ ಅವನನ್ನು ಚಿಕಿತ್ಸೆಯಿಲ್ಲದೆ ಬೆಳೆದ ವ್ಯಾಧಿಯಂತೆ ವ್ಯಾಪಿಸಿ ಶತ್ರುಪಕ್ಷದವರೇ ನಾಶ ಮಾಡಿಬಿಡುತ್ತಾರೆ. ಇವತ್ತು ಹಗೆ ಎಷ್ಟೇ ಸಣ್ಣವನಿರಬಹುದು, ಮರದ ಬುಡದಲ್ಲಿ ಹುಟ್ಟಿದ ಹುತ್ತ ಮುಂದೆ ಆ ಮರವನ್ನೇ ನುಂಗುವ ಹಾಗೆ ನುಂಗಿ ಬಿಡುತ್ತಾನೆ.

ಅಪ್ಪಾಜಿ, ಶತ್ರು ಕಂಡು ಹಿಗ್ಗಬೇಡ. ತಾನು